**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸೆಷನ್ಸ್‌ಕೇಸ್ ನಂ. 24/2015**

**ದೋ.ಸಾ. : 29 ಪ್ರಾ.ಸಾ. : 20**

ಸಾಕ್ಷಿಯ ಹೆಸರು : ಡಾ. ರವೀಂದ್ರ

ತಂದೆಯ ಹೆಸರು : ಪಂಚಾಕ್ಷರಿ ಎಲಿಗಾರ

ವಯಸ್ಸು : 56 ವರ್ಷ

ಉದ್ಯೋಗ : Professor ಹಾಗೂ ವಿಭಾಗ ಮುಖ್ಯಸ್ಥರು , ಸುಟ್ಟ ಗಾಯ ಮತ್ತು ಪ್ಲಾಸ್ಟಿಕ್ ಸರ್ಜರಿ ವಿಭಾಗ , ಕಿಮ್ಸ್‌ಹುಬ್ಬಳ್ಳಿ

ವಾಸ : ಹುಬ್ಬಳ್ಳಿ

**ದಿನಾಂಕಃ 20-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಕಳೆದ 24 ವರ್ಷಗಳಿಂದ ನಾನು ಆ ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಸುಟ್ಟ ಗಾಯಗಳಿಗೆ ಚಿಕಿತ್ಸೆ ನೀಡಲು ವಿಶೇಷ ತರಬೇತಿ ಪಡೆದಿದ್ದೇನೆ. ನಾನು ಎಂ ಸಿ ಎಚ್ ಪ್ಲಾಸ್ಟಿಕ್ ಸರ್ಜರಿ ಮತ್ತು ಎಂ ಎಸ್ ಜನರಲ್ ಸರ್ಜರಿ ವ್ಯಾಸಂಗ ಮಾಡಿದ್ದೇನೆ. ನನ್ನ ಕರ್ತವ್ಯದ ಅವಧಿಯಲ್ಲಿ ನಾನು ಸಾವಿರಾರು ಸುಟ್ಟ ಗಾಯಗಳ ರೋಗಿಗಳಿಗೆ ಚಿಕಿತ್ಸೆ ನೀಡಿದ್ದೇನೆ.

2. ಈ ಪ್ರಕರಣದಲ್ಲಿ ದಿನಾಂಕ 12.02.2015 ರಂದು ಶ್ರೀಮತಿ ಶಬ್ರಿನಾ ಎಂಬ ಮಹಿಳೆಯನ್ನು ಬೆಳಿಗ್ಗೆ 2.56 ಗಂಟೆಗೆ ಆಕೆಗೆ ಆಗಿದ್ದ ಸುಟ್ಟ ಗಾಯಗಳ ಚಿಕಿತ್ಸೆಗೆ ನಮ್ಮ ಆಸ್ಪತ್ರೆಯಲ್ಲಿ ದಾಖಲು ಮಾಡಿದರು. ಆಕೆಯನ್ನು ಹೊನ್ನಾವರ ತಾಲೂಕು ಆಸ್ಪತ್ರೆಯಿಂದ ಹೆಚ್ಚಿನ ಚಿಕಿತ್ಸೆಗಾಗಿ ಕಳುಹಿಸಿದ್ದರು. ನಾನು ಆಕೆಯನ್ನು ಪ್ರಥಮವಾಗಿ ತುರ್ತು ಚಿಕಿತ್ಸಾ ವಿಭಾಗದಲ್ಲಿ ದಾಖಲು ಮಾಡಲಾಯಿತು. ನಂತರ ಬೆಳಿಗ್ಗೆ 8.00 ಗಂಟೆಗೆ ಆಕೆಯನ್ನು ಆಸ್ಪತ್ರೆಯ ಸುಟ್ಟ ಗಾಯಗಳ ವಿಭಾಗಕ್ಕೆ ವರ್ಗಾಯಿಸಲಾಯಿತು. ನಾನು ಆಕೆಗೆ ಬೆಳಿಗ್ಗೆ 9.00 ಗಂಟೆಗೆ ದಿನಾಂಕ 12.02.2015 ರಂದು ಚಿಕಿತ್ಸೆ ಪ್ರಾರಂಭಿಸಿದೆ . ತುರ್ತು ಚಿಕಿತ್ಸಾ ವಿಭಾಗದಲ್ಲಿ ನಾನು ಆಕೆಗೆ ಚಿಕಿತ್ಸೆ ನೀಡಿರುವುದಿಲ್ಲ. ನನ್ನ ವಿಭಾಗಕ್ಕೆ ಬರುವುದಕ್ಕೆ ಮೊದಲೇ ಆಕೆಗೆ ತುರ್ತು ಚಿಕಿತ್ಸೆಯನ್ನು ನಮ್ಮ ಆಸ್ಪತ್ರೆಯಲ್ಲಿ ನೀಡಲಾಗಿತ್ತು . ದಿನಾಂಕ 12.02.2015 ರಿಂದ 04.03.2015 ರವರಿಗೆ ಆಕೆ ಮೃತ ಪಡುವ ತನಕ ನಾನು ಆಕೆಗೆ ನನ್ನ ವಿಭಾಗದಲ್ಲಿ ಚಿಕಿತ್ಸೆ ನೀಡಿರುತ್ತೇನೆ. ಆಕೆ ನನ್ನ

ವಿಭಾಗದಲ್ಲಿ ದಿನಾಂಕ 12.02.2015 ರಲ್ಲಿ ದಾಖಲಾದಾಗಿನಿಂದ ದಿನಾಂಕ 04.03.2015 ರಂದು ಬೆಳಗ್ಗೆ 9.00 ಗಂಟೆವರೆಗೆ ಆಕೆ ಪ್ರಜ್ಞಾ ಸ್ಥಿತಿಯಲ್ಲಿಯೇ ಇದ್ದಳು. ದಿನಾಂಕ 14.02.2015 ರಂದು ನಮ್ಮ ವಿಭಾಗದಲ್ಲಿ ಆಕೆಯ ಮರಣೋನ್ಮುಖ ಹೇಳಿಕೆಯನ್ನು ದಾಖಲು ಮಾಡಿಕೊಂಡಾಗ ಆಕೆ ಪೂರ್ಣ ಪ್ರಜ್ಞಾವಸ್ಥೆಯಲ್ಲಿ ಇದ್ದಳು. ನಾನು ಆ ದಿನ ಆಕೆ ಪೂರ್ಣ ಪ್ರಜ್ಞಾವಸ್ಥೆಯಲ್ಲಿ ಇದ್ದ ಬಗ್ಗೆ ಆಕೆಯ ಚಿಕಿತ್ಸಾ ಕೇಸ್ ಶೀಟ್ ನಲ್ಲಿ ನಮೂದಿಸಿದ್ದೇನೆ. ಆಕೆಗೆ ಏನು ಚಿಕಿತ್ಸೆ ನೀಡಿದ್ದೇನೆ ಹಾಗೂ ಆಕೆಗೆ ಶೇಕಡಾ ಎಷ್ಟು ಸುಟ್ಟ ಗಾಯ ಆಗಿತ್ತು ಎಂದು ಆಕೆಯ ಕೇಸ್ ಶೀಟ್ ನಲ್ಲಿ ಮತ್ತು summary sheet ನಲ್ಲಿ ನಮೂದಿಸಿದ್ದೇನೆ. ನಾನು ಈ ದಿನ ಆಕೆ ಚಿಕಿತ್ಸೆಗೆ ಸಂಬಂಧಪಟ್ಟ ಆಸ್ಪತ್ರೆಯ ಮೂಲ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಆ ದಾಖಲಾತಿಗಳನ್ನು ಮತ್ತು ಅದರಲ್ಲಿ ನನ್ನ ರುಜುಗಳನ್ನು ಗುರುತಿಸುತ್ತೇನೆ. ಈಗ ಆ ದಾಖಲಾತಿಗಳೊಂದಿಗೆ ಬರೆದ ಕವಚ ಪತ್ರ ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಆ ಕವಚ ಪತ್ರವನ್ನು ನಿ.ಪಿ. 28 ಎಂದು ಗುರುತಿಸಲಾಯಿತು. ಅದರಲ್ಲಿ ಸಾಕ್ಷಿಯ ರುಜುವನ್ನು ನಿ.ಪಿ. 28(ಎ) ಎಂದು ಗುರುತಿಸಲಾಯಿತು. ಈಗ ನಾನು ಸದರಿ ಗಾಯಾಳುವಿನ / ಮೃತ ಶಬ್ರಿನಾಳ summary sheet ನೋಡಿರುತ್ತೇನೆ. ಅದು ಒಂದು ಹಾಳೆ ಇದೆ. ಅದರಲ್ಲಿ ನನ್ನ ರುಜು ಇದೆ. ಅದನ್ನು ನಿ.ಪಿ. 28/1 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿ.ಪಿ. 28/1(ಎ) ಎಂದು ಗುರುತಿಸಲಾಯಿತು. (ನಿ.ಪಿ. 28/1 ರಲ್ಲಿ ಎಡ ಕೆಳಭಾಗದ ಮೂಲೆ ಹರಿದಿದೆ . ಹರಿದು ಹೋದ ಚೂರು ಕಡತದಲ್ಲಿ ಇರುವುದಿಲ್ಲ). ನಮ್ಮ ಆಸ್ಪತ್ರೆಯ ಹೊರರೋಗಿ ವಿಭಾಗದ ರೋಗಿಯ ಸಹಾಯಕನ ಕಾರ್ಡ್ ಅನ್ನು ಈಗ ನೋಡಿರುತ್ತೇನೆ. ಅದನ್ನು  ನಿ.ಪಿ. 28/2 ಎಂದು ಗುರುತಿಸಲಾಯಿತು. ಆಕೆಗೆ ಪ್ರಥಮವಾಗಿ ಹೊರ ರೋಗಿ ವಿಭಾಗದಲ್ಲಿ ದಾಖಲಾದಾಗ ನೀಡಿದ OPD ಹಾಗೂ ನಂತರ ಆಕೆಗೆ ಒಳ ರೋಗಿಯಾಗಿ ನಮ್ಮ ವಿಭಾಗಕ್ಕೆ ಬಂದ ದಾಖಲೆ ಈಗ ನೋಡಿರುತ್ತೇನೆ. ಅದು 2 ಹಾಳೆ ಇದೆ. ಅದರಲ್ಲಿ ನನ್ನ ರುಜು ಇದೆ. ಸದರಿ ದಾಖಲಾತಿಯನ್ನು ನಿ.ಪಿ. 28/3 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿ.ಪಿ. 28/3(ಎ) ಎಂದು ಗುರುತಿಸಲಾಯಿತು. ನಂತರ ಆಕೆಯ ಮರಣಕ್ಕೆ ಕಾರಣದ ಬಗ್ಗೆ ನನ್ನ ಅಭಿಪ್ರಾಯ ನೀಡಿರುವ ದಾಖಲಾತಿ ಈಗ ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಆ ದಾಖಲಾತಿಯನ್ನು ನಿ .ಪಿ. 28/4 ಎಂದು ಗುರುತಿಸಲಾಯಿತು. ಅದರಲ್ಲಿ ಸಾಕ್ಷಿಯ ರುಜುವನ್ನು ನಿ.ಪಿ. 28/4(ಎ) ಎಂದು

ಗುರುತಿಸಲಾಯಿತು. ಈಗ ಆಕೆಗೆ ಚಿಕಿತ್ಸೆ ನೀಡಿದ ಬಗ್ಗೆ ಕೇಸ್ ಶೀಟ್ ನೋಡಿರುತ್ತೇನೆ. ಅದು 13 ಹಾಳೆ ಇದೆ. ಅದನ್ನು ನಿ.ಪಿ. 28/5 ಎಂದು ಗುರುತಿಸಲಾಯಿತು. ನಂತರ ದಿನಾಂಕ 14.02.2015 ರಂದು ತನಿಖಾಧಿಕಾರಿಗಳು ಆಕೆಯ fitness certificate ನೀಡುವಂತೆ ನಮ್ಮ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿಯವರಿಗೆ ಕೋರಿ ಬರೆದ ಪತ್ರ ಈಗ ನೋಡಿರುತ್ತೇನೆ. ಆ ಪತ್ರವನ್ನು ನಿ.ಪಿ. 28/6 ಎಂದು ಗುರುತಿಸಲಾಯಿತು. ಅದರಲ್ಲಿ ನನ್ನ ಪರವಾಗಿ CMO ರವರು ರುಜು ಮಾಡಿದ್ದಾರೆ. ಈಗ ನಾನು ಸದರಿ ಗಾಯಾಳುವನ್ನು ಫಿಜಿಯೋ ಥೆರಪಿಸ್ಟ್ ರವರಿಗೆ ಅವರಿಂದ ಚಿಕಿತ್ಸೆಗಾಗಿ ಕಳುಹಿಸಿದ ಬಗ್ಗೆ ಉಲ್ಲೇಖನಾ ಪತ್ರ ನೋಡಿರುತ್ತೇನೆ. ನನ್ನ ಮಾರ್ಗದರ್ಶನದಲ್ಲಿ ನನ್ನ ವಿಭಾಗದ ಸ್ನಾತಕೋತ್ತರ ಪದವೀಧರ ವಿದ್ಯಾರ್ಥಿ ಆ ಪತ್ರಕ್ಕೆ ರುಜು ಮಾಡಿದ್ದಾರೆ. ಆ ಪತ್ರವನ್ನು ನಿ.ಪಿ. 28/7 ಎಂದು ಗುರುತಿಸಲಾಯಿತು. ಈಗ ನೋಡಿದ ದಾಖಲೆ ನಮ್ಮ ಆಸ್ಪತ್ರೆಯ ಮೈಕ್ರೋ ಬಾಯಲಾಜಿ ವಿಭಾಗದವರು ರೋಗಿಗೆ ನೀಡಬಹುದಾದ wound swab culture report ಆಗಿರುತ್ತದೆ . ಅದನ್ನು ನಿ.ಪಿ. 28/8 ಎಂದು ಗುರುತಿಸಲಾಯಿತು. ಈಗ ತೋರಿಸಿದ ನಿ.ಪಿ. 28/9 ದಿನಾಂಕ 26.02.2015 ರಿಂದ ಆಕೆ ಮೃತ ಪಡುವ ದಿನಾಂಕ 04.03.2015 ರವರೆಗಿನ ಕೇಸ್ ಶೀಟ್ ಆಗಿರುತ್ತದೆ . ಈಗ ನೋಡುತ್ತಿರುವ ದಾಖಲೆ ನಮ್ಮ ನರ್ಸಿಂಗ್ ಸ್ಟಾಫ್ ನಿರ್ವಹಿಸಿರುವ ಚಿಕಿತ್ಸಾ ಚಾರ್ಟ್ ಆಗಿದೆ . ಅದನ್ನು ನಿ.ಪಿ. 28/10 ಎಂದು ಗುರುತಿಸಲಾಯಿತು. ಆಕೆ ದಿನಾಂಕ 04.03.2015 ರಂದು ಗಂಭೀರ ಸ್ಥಿತಿಗೆ ಹೋದ ಬಗ್ಗೆ ಮತ್ತು ಅದಕ್ಕೆ ಮಾಡಿದ ಚಿಕಿತ್ಸೆಯ ವಿವರದ ದಾಖಲಾತಿಯಾಗಿದೆ. ಅದನ್ನು ನಿ.ಪಿ. 28/11 ಎಂದು ಗುರುತಿಸಲಾಯಿತು. ಈಗ ಆಕೆ ಮೃತಪಟ್ಟ ಬಗ್ಗೆ ಆಸ್ಪತ್ರೆಯ CMO ರವರಿಗೆ ನಾನು ನೀಡಿದ ವರದಿ ಆಗಿದೆ . ನನ್ನ ಮಾರ್ಗದರ್ಶನದಲ್ಲಿ ನನ್ನ ವಿಭಾಗದ ಸ್ನಾತಕೋತ್ತರ ಪದವೀಧರ ವಿದ್ಯಾರ್ಥಿ ಅದನ್ನು ಸಲ್ಲಿಸಿದ್ದಾರೆ. ಅದನ್ನು ನಿ.ಪಿ. 28/12 ಎಂದು ಗುರುತಿಸಲಾಯಿತು. ಆಕೆ ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಆಸ್ಪತ್ರೆಗೆ ಚಿಕಿತ್ಸಾ ಶುಲ್ಕ ಪಾವತಿ ಮಾಡಿರುವ ದಾಖಲಾತಿ ಎರಡು ರಸೀದಿ ಈಗ ನೋಡಿರುತ್ತೇನೆ. ಅವುಗಳನ್ನು ನಿ.ಪಿ. 28/13 ಮತ್ತು 14 ಎಂದು ಗುರುತಿಸಲಾಯಿತು. ಆಕೆ ಮೃತಪಟ್ಟ ನಂತರ ಆಕೆಯ ಶವವನ್ನು ನಮ್ಮ ವಿಭಾಗದಿಂದ ಆಸ್ಪತ್ರೆಯ ಶವಾಗಾರಕ್ಕೆ ಸ್ಥಳಾಂತರಿಸಲಾಯಿತು. ಆಕೆ ನಮ್ಮ ವಿಭಾಗದಲ್ಲಿ ಚಿಕಿತ್ಸೆ ಪಡೆಯುವಾಗ ಆಕೆಯನ್ನು ನೋಡಿಕೊಳ್ಳಲು ಆಕೆಯ ತಾಯಿ ಅಥವಾ ಸಂಬಂಧಿಕರಿಗೆ ಅವಕಾಶ ನೀಡಲಾಗಿತ್ತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್ ಬಿ ಎಸ್ ರವರಿಂದ**

3. ನಾನು ಸದರಿ ರೋಗಿಗೆ ದಿನಾಂಕ 12.02.2015 ರಂದು ಬೆಳಿಗ್ಗೆ 9.00 ಗಂಟೆಗೆ ಮೊದಲ ಬಾರಿಗೆ ಪರೀಕ್ಷಿಸಿ ಚಿಕಿತ್ಸೆ ನೀಡಿದ್ದೇನೆ. ನಾನು ಆಕೆಯನ್ನು ಆಗ ಪರೀಕ್ಷಿಸಿದಾಗ ಆಕೆ ಆಸ್ಪತ್ರೆಯ burns ward ನಲ್ಲಿ ಇದ್ದಳು. ಆ ವಾರ್ಡ್ ನಲ್ಲಿ ಮಹಿಳಾ ರೋಗಿಗಳಿಗೆ ಮಾತ್ರ ಇರಿಸುತ್ತಿದ್ದೆವು . ನಾನು ಪ್ರಥಮವಾಗಿ ಆಕೆಯನ್ನು ಪರೀಕ್ಷಿಸಿದಾಗ ಆಕೆ ಪ್ರಜ್ಞಾ ಸ್ಥಿತಿಯಲ್ಲಿ ಇದ್ದಳು. ಆಕೆಯ BP , pulse , respiratory ಸರಿಯಾಗಿ ಇತ್ತು . ನಾನು ಚಿಕಿತ್ಸೆ ನೀಡುವ ಸಮಯದಲ್ಲಿ ಆಕೆಯನ್ನು ತೀವ್ರ ಚಿಕಿತ್ಸಾ ಘಟಕಕ್ಕೆ ದಾಖಲು ಮಾಡಿರುವುದಿಲ್ಲ. ಆಕೆಯ ಮೈಮೇಲೆ ಸುಟ್ಟ ಗಾಯಗಳು ತಲೆ , ಮುಖ , ಕುತ್ತಿಗೆ , ಎರಡೂ ಕೈಗಳು , ಎದೆ ಮುಂಭಾಗ ಮತ್ತು ಬೆನ್ನು ಹಾಗೂ ಎರಡೂ ಕಾಲಿನ ಮುಂಭಾಗ ಇದ್ದವು . ಅವು ತೀವ್ರ ಸ್ವರೂಪದ ಗಾಯಗಳು ಆಗಿದ್ದವು. ಆ ಸಮಯದಲ್ಲಿ ಆಕೆಯ ಮುಖ ಮತ್ತು ನಾಲಿಗೆ ದಪ್ಪಗಾಗಿತ್ತು ಎಂದರೆ ಸ್ವಲ್ಪ ಪ್ರಮಾಣದಲ್ಲಿ ದಪ್ಪಗಾಗಿತ್ತು . ಆಗ ಆಕೆ ಮಾತನಾಡುತ್ತಿದ್ದಳು ಆಕೆ ಏನು ಮಾತನಾಡುತ್ತಿದ್ದಳು ಎಂದು ತಿಳಿಯುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ನಾಲಿಗೆ ದಪ್ಪ ಆದಾಗ ಮಾತನಾಡಲು ಕಷ್ಟ ಆಗುತ್ತದೆ ಎಂದರೆ ಸ್ವಲ್ಪ ಕಷ್ಟ ಆಗುತ್ತದೆ ಆದರೆ ಮಾತನಾಡುವುದು ಅರ್ಥ ಆಗುತ್ತದೆ . ನಮ್ಮ ಜೊತೆ ಸದರಿ ಶಬ್ರಿನ್ ಮಾತನಾಡುತ್ತಿದ್ದಳು. ಆಕೆ ಕನ್ನಡ ಹಿಂದಿ ಭಾಷೆಯಲ್ಲಿ ಮಿಶ್ರಣ ಮಾಡಿ ನನ್ನೊಂದಿಗೆ ಮಾತನಾಡುತ್ತಿದ್ದಳು. ಆಕೆಗೆ ಕನ್ನಡ ಸರಿಯಾಗಿ ಬರುತ್ತಿರಲಿಲ್ಲ ಎಂದರೆ ಈಗ ನನಗೆ ನೆನಪಿಲ್ಲ. ಆಕೆಗೆ antibiotic culture test ಮಾಡಿರುತ್ತೇನೆ. ಆಕೆಗೆ ciprofloxacin antibiotic ಹೊಂದಾಣಿಕೆ ಆಗುತ್ತಿತ್ತು . Ciprofloxacin antibiotic ಅಲ್ಲದೇ ಬೇರೆ antibiotic ಅನ್ನು ಆಕೆಗೆ ನೀಡಲಾಗಿದೆಯೇ ಎಂದರೆ pipracillin tazobactum ಹಾಗೂ amikacin ಅನ್ನು ಸಹ ನೀಡಿರುತ್ತೇನೆ. ಮೊದಲಿಗೆ antibiotic culture test ಮಾಡಿದಾಗ ಆಕೆಯ ಚರ್ಮದ ಮೇಲ್ಭಾಗದ swab ಅನ್ನು ಮಾತ್ರ ಪಡೆದು ವಿಶ್ಲೇಷಣೆ ಮಾಡಲಾಗಿತು. ಆಗ ಚರ್ಮದ ಕೆಳಗಿನ ಭಾಗದ ರಸವನ್ನು ಅಥವಾ ಅದರ ಕೆಳಗೆ ಇದ್ದದ್ದನ್ನು ವಿಶ್ಲೇಷಣೆ ಮಾಡಲು ಸಾಧ್ಯ ಇರಲಿಲ್ಲ . ಆದ್ದರಿಂದ ನಂತರ ನಾನು higher antibiotic ನೀಡಿರುತ್ತೇನೆ. Antibiotic ಅಲ್ಲದೇ ಆಕೆಯ ಚರ್ಮಕ್ಕೆ ಲೇಪನ ಮಾಡಿಕೊಳ್ಳಲು silver sulphadazin cream ಅನ್ನು ನೀಡಿದ್ದೆ. ಅದನ್ನು ಬಿಟ್ಟು ಬೇರೆ cream ನೀಡಿರುವುದಿಲ್ಲ. ಆಕೆಗೆ ಆಗಿದ್ದ ಯಾವುದೇ ಸುಟ್ಟ ಗಾಯದಲ್ಲಿ muscle ಗೆ ಗಾಯ

ಆಗಿರಲಿಲ್ಲ. ಕೇವಲ ಚರ್ಮಕ್ಕೆ ಮಾತ್ರ ಸುಟ್ಟ ಗಾಯ ಆಗಿತ್ತು . ಆಕೆಯ internal organ ಗೆ damage ಆಗಿದೆಯಾ ಎಂದು ನಾನು ಪರೀಕ್ಷೆ ಮಾಡಿರುತ್ತೇನೆ ಆದರೆ ಯಾವುದೇ damage ಆಗಿದ್ದದ್ದು ಕಂಡು ಬರಲಿಲ್ಲ. ಆಕೆಯ trachea ನಲ್ಲಿ blackish mucus ಕಂಡು ಬಂತಾ ಎಂದರೆ ಅದು ಕಾಣಿಸಲು ಸಾಧ್ಯ ಇರುವುದಿಲ್ಲ. ಆಕೆಯ pericardium ನಲ್ಲಿ fluid ಕಂಡು ಬಂತಾ ಎಂದರೆ ಅದು ಹೊರಗಡೆಯಿಂದ ಕಂಡು ಬಂದಿಲ್ಲ. ನಾನು ಆಕೆಯ internal organ ಪರೀಕ್ಷೆ ಮಾಡಿದ್ದೇನಾ ಎಂದರೆ ಆ ರೀತಿ ಪರೀಕ್ಷೆ ಇರುವುದಿಲ್ಲ ಆದರೆ systemic examination ಅನ್ನು ಆ ಬಗ್ಗೆ ಮಾಡಿದ್ದೇನೆ. ಯಾವುದೇ abnormality ಅದರಲ್ಲಿ ಕಂಡು ಬಂದಿರುವುದಿಲ್ಲ. ಆಕೆಯ  ಮೆದುಳು ಮತ್ತು ಶ್ವಾಸಕೋಶ ನಾನು ಪರೀಕ್ಷೆ ಮಾಡಿದ್ದೇನಾ ಎಂದರೆ ನಾನು ಆಕೆಯ ಪ್ರಜ್ಞಾ ಸ್ಥಿತಿ ಚಲನೆ ಪರೀಕ್ಷೆ ಮಾಡಿರುತ್ತೇನೆ ಅದರಲ್ಲಿ ಯಾವುದೇ ಅಸಹಜತೆ ಕಂಡು ಬರಲಿಲ್ಲ. ಆಕೆಯ clinical examination ಮಾಡಿದಾಗ ಆಕೆಗೆ chest congestion ಕಂಡು ಬಂದಿರುವುದಿಲ್ಲ. ನಾನು ಆಕೆಯ peritoneal cavity ಪರೀಕ್ಷಿಸಿದಾಗ ಖಾಲಿ ಇತ್ತಾ ಅಥವಾ ತುಂಬಿತ್ತಾ ಎಂದರೆ ನಾನು clinical ಪರೀಕ್ಷೆಯನ್ನು ಆ ಬಗ್ಗೆ ಮಾಡಿದಾಗ fluid ಅಲ್ಲಿ ಕಂಡು ಬಂದಿಲ್ಲ. ಸುಟ್ಟ ಗಾಯಗಳು ಯಾವ ಡಿಗ್ರಿಯವು ಆಗಿದ್ದವು ಎಂದರೆ second degree partial ಮತ್ತು second degree deep ಇದ್ದವು . ಆಕೆಗೆ septicaemia ನಿಂದ ಮೃತಪಟ್ಟಿರುತ್ತಾಳೆ. Muscle ಗೆ damage ಆದಾಗ ಮಾತ್ರ septicaemia ಆಗುತ್ತದೆ ಎಂದರೆ ಸರಿಯಲ್ಲ. ಚರ್ಮಕ್ಕೆ ಮಾತ್ರ septicaemia ಆಗಿ ಮೃತಪಡುವುದು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಆಕೆ shock ನಿಂದ ಮೃತಪಟ್ಟಿದ್ದಾಳೆ ಹಾಗೂ septicaemia ದಿಂದ ಮೃತಪಟ್ಟಿಲ್ಲ ಎಂದರೆ ಸರಿಯಲ್ಲ. ಈಗ ನ್ಯಾಯಾಲಯದ ಕಡತದಲ್ಲಿ ತೋರಿಸಿದ resuscicitation notes ನಲ್ಲಿ ನನ್ನ ರುಜು ಇದೆ. ಅದು ದೃಢೀಕೃತ ದಾಖಲಾತಿ ಆಗಿದೆ . ಸದರಿ ದಾಖಲಾತಿಯನ್ನು ನಿ.ಡಿ. 1 ಎಂದು ಗುರುತಿಸಲಾಯಿತು. (ಅದು ಅಭಿಯೋಜನೆ ಪರ ಹಾಜರುಪಡಿಸಿರುವ ದಾಖಲಾತಿಯಾಗಿದೆ). ಸಾಕ್ಷಿ ಮುಂದುವರಿದು ಹೇಳುತ್ತಾರೆ ನಿ.ಡಿ. 1 ರ ಮೂಲ ಪ್ರತಿ ನಿ.ಪಿ. 28/11 ಆಗಿದೆ . ನಿ.ಡಿ. 1 ರಲ್ಲಿ ನನ್ನ ಸಹಿ ನೆರಳಚ್ಚು ಇರುವ ಭಾಗ ಬೇರೆ ದಾಖಲಾತಿಯಿಂದ ಅದರಲ್ಲಿ ನೆರಳಚ್ಚು ಆಗಿದೆ. ಮೂಲ ದಾಖಲಾತಿಯಲ್ಲಿ ನನ್ನ ಸಹಿ ಇರುವುದಿಲ್ಲ. ನಿ.ಪಿ. 28/11 ರಲ್ಲಿ ಚಿಕಿತ್ಸೆ ಬಗ್ಗೆ ನೀಡಿರುವ ಸೂಚಿ ನಮ್ಮ ಸ್ನಾತಕೋತ್ತರ ವಿದ್ಯಾರ್ಥಿಯದ್ದು ಆಗಿದೆ . ಅದರಲ್ಲಿ ಅದನ್ನು ಬರೆದವರು

ರೋಗಿಯು still not responding ಎಂದು ಬರೆದಿದ್ದಾರೆ ಎಂದರೆ ಹೌದು . ಸದರಿ ರೋಗಿ ಆಸ್ಪತ್ರೆಯಲ್ಲಿ ದಾಖಲಾದಾಗಲೂ respond ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. Still not responding ಎಂದು ಹೇಳಿರುವುದರ ಅರ್ಥ ಮೊದಲೂ ಸಹ respond ಮಾಡಿಲ್ಲ ಎಂದು ಆಗುತ್ತದೆ ಎಂದರೆ ರಾತ್ರಿ 7.45 ಗಂಟೆಗೆ ಅವರು ಚಿಕಿತ್ಸೆ ಪ್ರಾರಂಭಿಸಿದ್ದು ನಂತರ 15 ನಿಮಿಷ ಆದ ಮೇಲೆ ಯಾವುದೇ improvement ಇಲ್ಲದಿದ್ದ ಕಾರಣ ಆ ಚಿಕಿತ್ಸೆಗೆ response ಇಲ್ಲ ಎಂದು ಆ ರೀತಿ ಬರೆದಿದ್ದಾರೆ. ನಾನು ಖುದ್ದಾಗಿ ಸದರಿ ರೋಗಿಗೆ ಚಿಕಿತ್ಸೆ ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ವಿದ್ಯಾರ್ಥಿ ಕಡೆ ಸದರಿ ರೋಗಿಯನ್ನು ನೀಡಿ ಆಕೆ ಮೃತಪಡಲು ನಾನು ಕಾರಣ ಆಗಿದ್ದೇನೆ ಎಂದರೆ ಸರಿಯಲ್ಲ.

4. ದಿನಾಂಕ 12.02.2015 ರಂದು ಸದರಿ ರೋಗಿ ನನ್ನ ವಿಭಾಗಕ್ಕೆ ನನ್ನ ಬಳಿಗೆ ಚಿಕಿತ್ಸೆಗೆ refer ಆಗಿ ಬಂದಿರುತ್ತಾರೆ. ನಾನು ಆಕೆಗೆ ಚಿಕಿತ್ಸೆ ಸಮಯದಲ್ಲಿ ಯಾವುದೇ ಶಸ್ತ್ರ ಚಿಕಿತ್ಸೆ ಮಾಡಿಲ್ಲ. ಆಕೆ ನನ್ನ ವಿಭಾಗದಲ್ಲಿ ಮೂರು ವಾರ ಅಂದರೆ ಸುಮಾರು 21-22 ದಿನ ಇದ್ದಳು . ಆ ಸಮಯದಲ್ಲಿ ಆಕೆಗೆ ಯಾವ ರೀತಿ ಆಹಾರ ಸೇವನೆ ಮಾಡಬೇಕು ಎಂದು ಸೂಚಿಸಿದ್ದೆ. ಆಕೆಗೆ ಪ್ರಾರಂಭದ ಕೆಲವು ದಿನಗಳಲ್ಲಿ ಬಾಯಿ ಮೂಲಕ ಕಡಿಮೆ ಆಹಾರ ಸೇವನೆ ಮಾಡಬೇಕು , ಸ್ವಲ್ಪ ದಿನ ಆದ ಮೇಲೆ ಜಾಸ್ತಿ ನೀರು ಕುಡಿಯಬೇಕು , ಇನ್ನೂ ಸ್ವಲ್ಪ stable ಆದ ಮೇಲೆ high protein diet ತೆಗೆದುಕೊಳ್ಳಬೇಕು ಎಂದು ಹೇಳಿದ್ದೆ. ಲಿಖಿತವಾಗಿ ನಾನು ಬರೆದ prescription case sheet ನಲ್ಲಿ ಇರುವುದಿಲ್ಲ. ಕೇಸ್ ಶೀಟ್ ನಲ್ಲಿ ಸುಟ್ಟ ಗಾಯ ಶೇಕಡಾ 55 ರಿಂದ 65 ಎಂದು ಯಾವ ಆಧಾರದ ಮೇಲೆ ಬರೆದಿದ್ದೇನೆ ಎಂದರೆ lund browder chart ಆಧಾರದ ಮೇಲೆ ನಮೂದಿಸಿದ್ದೇನೆ. ನನ್ನ ಚಿಕಿತ್ಸೆ ಸಮಯದಲ್ಲಿ ಆ ರೋಗಿಯನ್ನು ENT ವಿಭಾಗಕ್ಕೆ ನಾನು ಕಳುಹಿಸಿದ್ದೆ. ENT ವಿಭಾಗದವರು ಸುಟ್ಟ ಗಾಯ ಶೇಕಡಾ 45 ರಿಂದ 50 ಇದೆ ಎಂದು ಬರೆದಿದ್ದಾರೆ ಎಂದರೆ ಅವರು mistake ಮಾಡಿದ್ದಾರೆ ಮತ್ತು ಅವರು ಆ ಬಗ್ಗೆ authority ಅಲ್ಲ. ಕೇವಲ ENT ಬಗ್ಗೆ ಪರೀಕ್ಷೆ ಮಾಡಲು ರೋಗಿಯನ್ನು ಅವರ ಬಳಿ ಕಳುಹಿಸಿದ್ದೆ.

5. ನಾನು ಆ ರೋಗಿಗೆ ಚಿಕಿತ್ಸೆ ನೀಡುವ ಸಮಯದಲ್ಲಿ ಆಕೆಯ ಹೇಳಿಕೆಯನ್ನು ಪಡೆದುಕೊಳ್ಳುವ ಬಗ್ಗೆ ಪೊಲೀಸ್ ನವರಿಂದ ಯಾವುದೇ ಮನವಿ ನನಗೆ ಬಂದಿರುವುದಿಲ್ಲ. ನಾನು

ಆ ರೋಗಿಗೆ ಸರಿಯಾದ ಚಿಕಿತ್ಸೆ ನೀಡಿಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ಆಕೆಗೆ ಸರಿಯಾದ ಚಿಕಿತ್ಸೆ ದೊರೆತಿದ್ದರೆ ಆಕೆ ಬದುಕುತ್ತಿದ್ದಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ